**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ, ಬನಹಟ್ಟಿ**

**ಸಿಸಿ. 231/2022**
**ಸಿ.ಡಬ್ಲ್ಯೂ: 3 ಪಿ.ಡಬ್ಲ್ಯೂ: 2**

| | | |
|---|---|---|
| ಸಾಕ್ಷಿದಾರರ ಹೆಸರು | ಸಲಿಂ ಸೌದಾಗರ್ | |
| ತಂದೆ/ಗಂಡನ ಹೆಸರು | ಅಲ್ಲಾಭಕ್ಷ | |
| ವಯಸ್ಸು | 45 | ವರ್ಷ |
| ಉದ್ಯೋಗ | ಖಾಸಗಿ ಕೆಲಸ | |
| ವಾಸಸ್ಥಳ | ಮಹಾಲಿಂಗಪುರ | |

<u>ಸಾಕ್ಷಿಯನ್ನು ಇಂದು ದಿನಾಂಕ: **14-01-2026** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>
<u>ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ</u>

ಚಾಸಾ-1 ಮತ್ತು 2 ರವರ ಪರಿಚಯ. ಸುಮಾರು 9 ವರ್ಷಗಳ ಹಿಂದೆ ಮಹಾಲಿಂಗಪುರದ ಎಕ್ಸಂಬಿ ಊರಿನಲ್ಲಿ ನಾನು ಒಂದು ದಾಖಲಾತಿಗೆ ಸಹಿ ಮಾಡಿರುತ್ತೇನೆ.

2. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಸದರಿ ಸ್ಥಳಪಂಚನಾಮೆಯನ್ನು ನಿಪಿ-2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು.

3. ಸಾಕ್ಷಿಯು ಸ್ಥಳ ಪಂಚನಾಮೆಯಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

4. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಹಾಗೂ ಯಾವುದೇ ವಸ್ತುವನ್ನು ಜಪ್ತು ಮಾಡಿಕೊಂಡಿರುವುದಿಲ್ಲ.

5. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಹಿಡಿಗೆ ಅಳತೆಯ ಕಲ್ಲಿನ ಮೇಲೆ ಅಂಟಿಸಿದ ಚೀಟಿಯ ಮೇಲೆ ತನ್ನ ಸಹಿಯನ್ನು ಗುರುತಿಸಿದ್ದು , ಸದರಿ ಕಲ್ಲನ್ನು ಮು. ಮಾ.1 ಎಂದು ಗುರುತಿಸಲಾಯಿತು ಹಾಗೂ ಸಾಕ್ಷಿಯ ಸಹಿಯನ್ನು ಮು.ಮಾ.1 ಎ ಎಂದು ಗುರುತಿಸಲಾಯಿತು.

6. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕೀಲಿ ಕಪ್ಪಿ ಮೇಲೆ ಅಂಟಿಸಿದ ಚೀಟಿಯ ಮೇಲೆ ತನ್ನ ಸಹಿಯನ್ನು ಗುರುತಿಸಿದ್ದು , ಸದರಿ ಕಲ್ಲನ್ನು ಮು. ಮಾ.2 ಎಂದು ಗುರುತಿಸಲಾಯಿತು ಹಾಗೂ ಸಾಕ್ಷಿಯ ಸಹಿಯನ್ನು ಮು.ಮಾ.2 ಎ ಎಂದು ಗುರುತಿಸಲಾಯಿತು.

7. ನಿಪಿ-2 ರ ವಿಷಯಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಎ.ಪಿ.ಪಿ ವಕೀಲರಿಂದ**

ದಿನಾಂಕ:20-11-2015 ರಂದು ಸಂಜೆ 4.30 ರಿಂದ 5.30 ಗಂಟೆಯವರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಚಾಸಾ1 ರವರು ತೋರಿಸಿದ ಸ್ಥಳದಲ್ಲಿ ನಿಪಿ-2 ರಂತೆ ಪಂಚನಾಮೆಯನ್ನು ಜರುಗಿಸಿ ಛಾಯಾಚಿತ್ರವನ್ನು ಮತ್ತು ಕೈ ನಕಾಶೆಯನ್ನು ತೆಗೆದು ಮು.ಮಾ.1 ಮತ್ತು 2 ಅನ್ನು ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ನಾವು ರಾಜಿ ಆಗಿರುತ್ತವೆ ಎಂದರೆ ಸರಿ .

2. ನಿಪಿ-2 ರಂತೆ ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿದ್ದರು ಸಹ ಆರೋಪಿತರೊಂದಿಗೆ ರಾಜಿ ಆದ ಕಾರಣ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ಧೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಅದೆ.

Sd/-

**ಸಿವಿಲ್ ನ್ಯಾಯಾಧೀಶರು, ವ ಜೆ.ಎಮ್.ಎಫ್.ಸಿ.**
**ಬನಹಟ್ಟಿ.**